**ಎಸ್.ಸಿ.ಸಂಖ್ಯೆ:10022/2025**
**ಪ್ರಾ.ಸಾ.ಸಂಖ್ಯೆ: 1**
**ಚಾ.ಸಾ.ಸಂಖ್ಯೆ: 11**

**<u>ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿ: ಮುಧೋಳ</u>**

**ಎಸ್.ಸಿ.ಸಂಖ್ಯೆ: 10022/2025**

| | |
|---|---|
| ಹೆಸರು: | ಸಚಿನ ಸೊಕನಾಡಗಿ |
| ತಂದೆಯ ಹೆಸರು: | ಗೌಡಪ್ಪ |
| ವಯಸ್ಸು: | **22** ವರ್ಷ |
| ಉದ್ಯೋಗ: | ಒಕ್ಕಲುತನ |
| ವಾಸ: | ದಾದನಟ್ಟಿ |

**ಸಾಕ್ಷಿಯನ್ನು ದಿ: 19.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:-</u>**

**1.** ನನಗೆ ಆರೋಪಿತರ ಪರಿಚಯವಿದೆ. ಚಾಸಾ-**1** ನನ್ನ ತಂದೆಯಾಗಬೇಕು. ಚಾಸಾ-**10** ನನ್ನ ಅಣ್ಣ ಇರುತ್ತಾನೆ. ಚಾಸಾ-**12** ರಿಂದ **15** ರವರ ಪರಿಚಯವಿದೆ. ಚಾಸಾ-**10** ಮೋಟಾರ್ ಸೈಕಲ ಮೇಲಿಂದ ಬಿದ್ದಿದ್ದರಿಂದ ಗಾಯಗೊಂಡಿದ್ದರು. ಆರೋಪಿತರು ನಮ್ಮ ಜಮೀನಿಗೆ ಅತೀಕ್ರಮಣ ಪ್ರವೇಶ ಮಾಡಿಲ್ಲ, ಹಲ್ಲೆ ಮಾಡಿಲ್ಲ. ಅವಾಚ್ಯ ಶಬ್ದಗಳಿಂದ ಬೈದಿಲ್ಲ. ಚಾಸಾ-**10** ಇವರಿಗೆ ಗಾಯಪಡಿಸಿಲ್ಲ. ನಾನು ಆ ರೀತಿ ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ.

(ಈ ಸಮಯದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರು ಪ್ರತಿಕೂಲ ಪ್ರವೃತ್ತಿಯನ್ನು ತೋರುತ್ತಿದ್ದು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿಕೊಂಡಿದ್ದು ಅದು ನಿಜವೆಂದು ಕಂಡು ಬಂದಿದ್ದರಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)

**<u>ಪಾಟಿಸವಾಲು: ಸರ್ಕಾರಿ ಅಭಿಯೋಜಕರಿಂದ:-</u>**

**1.** ದಿ: **25.01.2023** ರಂದು ಆಗಿನ ಮಂತ್ರಿ ಗೋವಿಂದ ಕಾರಜೋಳ ಇವರ ಹುಟ್ಟುಹಬ್ಬದ ನಿಮಿತ್ಯ ನನ್ನ ಅಣ್ಣ ಚಾಸಾ-**10** ಶುಭಾಶಯದ ಬ್ಯಾನರ ಹಾಕಿಸಿದ್ದ, ಅದನ್ನು ಆರೋಪಿತರು ತಮ್ಮ ಫೋಟೊಗಳನ್ನು ಬ್ಯಾನರನಲ್ಲಿ ಹಾಕಿಲ್ಲ ಅಂತ ಜಗಳ ತೆಗೆದು ಬ್ಯಾನರ ಕಿತ್ತು ಒಗೆದಿದ್ದರು ಎಂದರೆ ಸರಿಯಲ್ಲ. ದಿ: **30.01.2023** ರಂದು ರಾತ್ರಿ **9-30** ಗಂಟೆಗೆ ಚಾಸಾ-**10** ನನ್ನ ಅಣ್ಣ ಹಾಗೂ ಚಾಸಾ-**12** ಕಿರಣ ಮಲ್ಲಾಪೂರದ ನಮ್ಮ ಜಮೀನ ಸರ್ವೆ ನಂ. **13** ರಲ್ಲಿ

**ಎಸ್.ಸಿ.ಸಂಖ್ಯೆ: 10022/2025**
**ಪ್ರಾ.ಸಾ.ಸಂಖ್ಯೆ: 1**
**ಚಾ.ಸಾ.ಸಂಖ್ಯೆ: 1 1**

ಟ್ರ್ಯಾಕ್ಟರನಿಂದ ಗಳೆ ಹೊಡೆಯಲು ಹೋಗಿದ್ದರು, ಅವರಿಬ್ಬರೆ ಹೋಗಿದ್ದರು ಅಂತ ನಾನು ನನ್ನ ತಂದೆ ಚಾಸಾ-**1** ಕೂಡ ಅಲ್ಲಿಗೆ ಹೋಗಿದ್ದೆವು, ಆಗ ರಾತ್ರಿ **11-00** ಗಂಟೆ ಸಮಯದಲ್ಲಿ ಈಗ ನ್ಯಾಯಾಲಯದ ಮುಂದಿರುವ ಆರೋಪಿತರು ಕೂಡಿಕೊಂಡು ಕೈಯಲ್ಲಿ ಕೊಯ್ತಾ, ಬಡಿಗೆ, ಕಲ್ಲು, ಕಬ್ಬಿಣದ ರಾಡಗಳನ್ನು ಹಿಡಿದುಕೊಂಡು ಬಂದು ಚಾಸಾ-**10** ಇವರಿಗೆ ಬೊಸಡಿ ಮಗನೆ ಅಂತ ಬೈದರು, ನಂತರ ಕೊಲೆ ಮಾಡುವ ಉದ್ದೇಶದಿಂದ ಆರೋಪಿ ನಂ. **1** ತನ್ನ ಕೈಯಲ್ಲಿದ್ದ ಕೊಯ್ತಾದಿಂದ, **2**ನೇ ಆರೋಪಿ ರಾಡನಿಂದ, **3**ನೇ ಆರೋಪಿ ಬಡಿಗೆಯಿಂದ, **4**ನೇ ಆರೋಪಿ ಕಲ್ಲಿನಿಂದ, ಚಾಸಾ-**10** ಇವನಿಗೆ ಹೊಡೆದು ಗಾಯ ಪಡಿಸಿದರು ಎಂದರೆ ಸರಿಯಲ್ಲ. ಅದರಿಂದಾಗಿ ಅವನಿಗೆ ಎಡಗೈ ಬೆರಳುಗಳು ಮುರಿದವು, ತಲೆಗೆ ರಕ್ತಗಯಾಯ ಆಗಿತ್ತು ಎಂದರೆ ಸರಿಯಲ್ಲ.

**2.** ಆಗ ನಾನು, ಚಾಸಾ-**1**, ಚಾಸಾ-**13** ಮತ್ತು **14** ರವರು ಸೇರಿ ಜಗಳ ಬಿಡಿಸಿಕೊಂಡೆವು ಎಂದರೆ ಸರಿಯಲ್ಲ. ನಂತರ ಅವನನ್ನು ಉಪಚಾರಕ್ಕಾಗಿ ಲೋಕಾಪೂರದ ಸಾಯಿ ಆಸ್ಪತ್ರೆಗೆ ದಾಖಲು ಮಾಡಿದೆವು, ನಂತರ ಹೆಚ್ಚಿನ ಚಿಕಿತ್ಸೆಗೆ ಬಾಗಲಕೋಟೆಯ ಕೆರೂಡಿ ಆಸ್ಪತ್ರೆಗೆ ಸೇರಿಸಿದೆವು ಎಂದರೆ ಸರಿಯಲ್ಲ. ನಂತರ ನಮ್ಮ ತಂದೆ ಪಿರ್ಯಾದಿ ನೀಡಿದ್ದು, ನಾನು ಪಂಚನಾಮೆ ಮಾಡಲು ಜಾಗೆ ತೋರಿಸಿದೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಈಗ ಓದಿ ಹೇಳಲಾದ ರೀತಿಯಲ್ಲಿ ಅಂದರೆ " ಹೋದ ವಾರ ದಿ: **25.03.2023** ರಂದು……. ನಾನು ಕೂಡ ಹಾಜರಿದ್ದೆನು" ಅಂತ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. **(**ಹೇಳಿಕೆಯ ಭಾಗವನ್ನು ನಿಪಿ-**7** ಅಂತ ಗುರುತಿಸಲಾಯಿತು**)**.

**3.** ಈಗ ನೋಡುತ್ತಿರುವ ಕೊಯ್ತಾ, ಕಬ್ಬಿಣದ ಸಳಿ, ಕಟ್ಟಿಗೆ ಬಡಿಗೆ, ಬಿದಿರಿನ ಬಡಿಗೆ ಹಾಗೂ ಎರಡು ಕಲ್ಲುಗಳು ಆರೋಪಿತರು ಚಾಸಾ-**10** ಇವರ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ ವಸ್ತುಗಳು ಇರುತ್ತವೆ ಎಂದರೆ ಸರಿಯಲ್ಲ. **(**ಅವುಗಳನ್ನು ನಿರ್ದಿಷ್ಟವಾಗಿ ಗುರುತಿಗೋಸ್ಕರ ಮುಮಾ-**1** ರಿಂದ **6** ಅಂತ ಗುರುತಿಸಲಾಯಿತು**)**. ಘಟನೆಯನ್ನು ಪ್ರತ್ಯಕ್ಷ್ಯ ನೋಡಿ ನಿಪಿ-**7** ರಂತೆ ಹೇಳಿಕೆ ನೀಡಿದ್ದರೂ ಕೂಡ ಈಗ ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಚಾಸಾ-**10** ಇವರು ಮೋಟಾರ್ ಸೈಕಲನಿಂದ ಬಿದ್ದು ಗಾಯ ಹೊಂದಿದ್ದಾರೆ ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಎಸ್.ಸಿ.ಸಂಖ್ಯೆಃ 10022/2025**
**ಪ್ರಾ.ಸಾ.ಸಂಖ್ಯೆಃ 1**
**ಚಾ.ಸಾ.ಸಂಖ್ಯೆಃ 1 1**

**ಪಾಟಿಸವಾಲು: ಆರೋಪಿ ಪರ ವಕೀಲರಿಂದ: ಇಲ್ಲ.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**